ಇರುವುದರಿಂದ ಈಗಾಗಲೆ ಚುನಾವಣೆಯಲ್ಲಿ ಸಹಕಾರಿ ವರ್ಷ ಬರುವುದರಿಂದ ಈ ಸಂದರ್ಭದಲ್ಲಿ ಚುನಾವಣೆ ಮಾಡುವುದಕ್ಕೆ ಹೋದರೆ ಶೇಕಡ ನೂರು ಭಾಗದಲ್ಲಿ ಐದು ಪರ್ಸೆಂಟ್ ಸಹ ಸೊಸೈಟಿಗಳು ಎಲ್‌ಜಿಬಲ್ ಇಲ್ಲ. ಆದುದರಿಂದ ತಾವು ಸಹಕಾರಿ ಚುನಾವಣೆಯನ್ನು ಒಂದು ವರ್ಷಗಳ ಕಾಲ ಮುಂದೆ ಹಾಕತಕ್ಕಂಥಾದ್ದು ಬಹಳ ಸೂಕ್ತ ಮತ್ತು ಸಮಂಜಸ. ಒಂದು ವೇಳೆ ಚುನಾವಣೆಯನ್ನು ಮಾಡಿದ್ದೇಯಾದರೆ ಈ ಪ್ರಜಾಪ್ರಭುತ್ವದಲ್ಲಿ ವ್ಯವಸ್ಥೆಯಲ್ಲಿ ಸಹಕಾರಿಗಳು ಶೇಕಡ 95 ಭಾಗ ಮತದಾನವನ್ನು ಮಾಡುವುದಕ್ಕೆ ಅರ್ಹರಲ್ಲದವರಾಗುತ್ತಾರೆ. ಮತ್ತು ಸರ್ಕಾರವೂ ಸಹ ರೈತರನ್ನು ಕಳೆದ ಸಾಲಿನಲ್ಲಿ ತುಂಬಾ ಕನ್‌ಫ್ಯೂಸ್ ಮಾಡಿದೆ. ಸಾಲ ವಸೂಲಿ ಮಾಡಬೇಡಿ ಎಂದು ಹೇಳುವುದು. ಈಗ ಚುನಾವಣೆಗೆ ಹೋದರೆ ಯಾವುದೂ ಸೊಸೈಟಿಗಳೂ ಎಲ್‌ಜಿಬಲ್ ಇಲ್ಲ, ಹಾಗೂ ಅವರಿಗೆ ಮತದಾನದ ಹಕ್ಕು ಇಲ್ಲದೆ ಇರುವುದರಿಂದ ಶೇಕಡ 95 ಭಾಗ ಮತದಾನಕ್ಕೆ ಅರ್ಹರಲ್ಲದೆ ಇರುವುದರಿಂದ ಈ ಸಹಕಾರಿ ಚುನಾವಣೆಯನ್ನು ಒಂದು ವರ್ಷ ಮುಂದಕ್ಕೆ ಹಾಕಿ ನಂತರ ಚುನಾವಣೆ ಮಾಡುವುದು ಸೂಕ್ತ ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಈಗಾಗಲೆ ಈ ಒಂದು ಲಾರಿಗಳ ವಿಚಾರದಲ್ಲಿ ಹೇಳುವುದಾದರೆ ಚಿಂತಾಮಣಿ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಸುಮಾರು ನಾಲ್ಕು ವರ್ಷಗಳಿಂದ...

ಶ್ರೀ ಕೆ. ಶ್ರೀನಿವಾಸ ಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಧರಮೆಗೌಡರು ಹೇಳುವುದು ನಿಜ. ಮೂರು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಬರ ಇದ್ದದ್ದರಿಂದ ವಸೂಲಿ ಕ್ರಮ ಬಹಳ ಸ್ಥಗಿತವಾಗಿದೆ. ಆದುದರಿಂದ ನಾವೂ ಕೂಡ ಅದನ್ನು ಯೋಚನೆ ಮಾಡಿ ಮುಂದಿ ಮಾರ್ಚ್ ವರೆಗೆ ಕೂಡ ಚುನಾವಣೆಗಳನ್ನೂ ಮುಂದಕ್ಕೆ ಹಾಕಬೇಕೆಂಬ ತೀರ್ಮಾನಕ್ಕೆ ಬಂದಿದ್ದೇವೆ.

ಅಧ್ಯಕ್ಷರು : ಈಗ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಒಂದು ಪ್ರಕಟಣೆ ಇದೆ.

12. ಪ್ರಕಟಣೆ

ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ 30.7.04 ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

1. ಕರ್ನಾಟಕ ಧನವಿನಿಯೋಗ ವಿಧೇಯಕ (ಸಂಖ್ಯೆ:1), 2004.
2. ಕರ್ನಾಟಕ ತೆರಿಗೆ ಕಾನೂನುಗಳ (2ನೇ ತಿದ್ದುಪಡಿ) ವಿಧೇಯಕ, 2004.
3. ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 2004.
4. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (2ನೇ ತಿದ್ದುಪಡಿ) ವಿಧೇಯಕ, 2004.
5. ಕರ್ನಾಟಕ ಕೆಲವು ಸರಕುಗಳ ಪ್ರವೇಶದ ಮೇಲೆ ವಿಶೇಷ ತೆರಿಗೆ ವಿಧೇಯಕ, 2004.

ಈಗ ಒಂದು ನಿರ್ಣಯ.

13. ಸರ್ಕಾರಿ ನಿರ್ಣಯ

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಉನ್ನತ ಶಿಕ್ಷಣ ಸಚಿವರಾದ ಶ್ರೀ ಡಿ. ಮಂಜುನಾಥ್ ಅವರ ಪರವಾಗಿ ಈ ಒಂದು ನಿರ್ಣಯವನ್ನು ನಾನು ಈ ಸದನದ ಮುಂದೆ ಮಂಡಿಸುವುದಕ್ಕೆ ಇಚ್ಛೆಪಡುತ್ತೇನೆ.

ನಿರ್ಣಯ

"ಕರ್ನಾಟಕ ವೈದ್ಯಕೀಯ ಮತ್ತು ದಂತ ವೈದ್ಯಕೀಯ, ಇಂಜಿನಿಯರಿಂಗ್ ವ್ಯಾಸಂಗ ಕ್ರಮಗಳಿಗೆ (ವಿಶೇಷ ಉಪಬಂಧಗಳು) ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ ವಿಧೇಯಕ, 2004 ('2004ರ ವಿಧಾನಸಭೆ ವಿಧೇಯಕ ಸಂಖ್ಯೆ: 22) ಇದನ್ನು ಅಧಿನಿಯಮಿಸಿದ ನಂತರ ಭಾರತ ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಈ ಸದನವು ನಿರ್ಣಯಿಸಿದೆ."

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ವಿವರಣೆ ಅನಗತ್ಯ. ಗೌರವಾನ್ವಿತ ಎರಡೂ ಸದನದ ಸದಸ್ಯರುಗಳು ಇದು ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರಿಸಬೇಕೆಂದು ಒತ್ತಾಯವನ್ನು ಮಾಡಿದ್ದರು. ಮಾನ್ಯ ಕುಮಾರಸ್ವಾಮಿಯವರು ಈ ಒಂದು ನಿರ್ಣಯವನ್ನು ಮಾಡಿಸಿದಂತಹ ಸಂದರ್ಭದಲ್ಲಿ ಆ ವಿಚಾರ ಬಿಟ್ಟು ಹೋಗಿತ್ತು. ಈಗ ವಿಧೇಯಕವಾಗಿರುವುದರಿಂದ ಅದನ್ನು ವಿಧೇಯಕ ಆದನಂತರ 9ನೇ ಅನುಸೂಚಿಯಲ್ಲಿ ಸಂವಿಧಾನದಲ್ಲಿ ಸೇರ್ಪಡೆಯಾಗುವುದರಿಂದ ಹೆಚ್ಚಿನ ಶಕ್ತಿ ಬರುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ಮಂಡಿಸಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಅಧ್ಯಕ್ಷರೆ, ವಿವರಣೆ ಕೊಟ್ಟರೆ ಚೆನ್ನಾಗಿ ಇರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇಷ್ಟೇ ವಿವರಣೆ ಇನ್ನೇನೂ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ಸಭೆನಲ್ಲೇ ಒಪ್ಪಿಕೊಂಡ ಅಮೆಂಡ್‌ಮೆಂಟ್ ಸೇರಿಸಬಹುದು ಸಾರ್.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಕರ್ನಾಟಕ ವೈದ್ಯಕೀಯ ಮತ್ತು ದಂತ ವೈದ್ಯಕೀಯ, ಇಂಜಿನಿಯರಿಂಗ್ ವ್ಯಾಸಂಗ ಕ್ರಮಗಳಿಗೆ (ವಿಶೇಷ ಉಪಬಂಧಗಳು) ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ ವಿಧೇಯಕ, 2004 (2004ರ ವಿಧಾನಸಭೆ ವಿಧೇಯಕ ಸಂಖ್ಯೆ:22) ಇದನ್ನು ಅಧಿನಿಯಮಿಸಿದ ನಂತರ ಭಾರತ ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಈ ಸದನವು ನಿರ್ಣಯಿಸುತ್ತದೆ."

ನಿರ್ಣಯವು ಅಂಗೀಕರಿಸಲ್ಪಟ್ಟಿದೆ ಮತ್ತು ನಿರ್ಣಯಕ್ಕೆ ಸರ್ವಾನುಮತದಿಂದ ಅನುಮೋದನೆ ದೊರಕಿದೆ.

ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಘಂಟೆಗೆ ಮುಂದೂಡುತ್ತಿದ್ದೇನೆ.

(ಸದನವು ತನ್ನ ಕಲಾಪವನ್ನು 8.37ಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ: 2.8.04ರಂದು ಸೋಮವಾರ ಬೆಳಿಗ್ಗೆ 11.00 ಘಂಟೆಗೆ ಸೇರಲು ನಿಶ್ಚಯಿಸಿತು)

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)